




ರಸ್ತೆ ಬದಿಯ ಕಲೆ

ಉಪಕರಣಗಳು, ಎಲ್.ಜಿ. ಟಿ.ವಿ, ಫ್ರಿಜ್, ವಾಷಿಂಗ್ ಮೆಷೀನು, ಮೈಕ್ರೋವೇವ್, ಟೋಸ್ಟರ್, ಮಿಕ್ಸಿಗಳು ಇತ್ಯಾದಿಗಳ ಬಗ್ಗೆ ಯಾರಿಗೆ ತಾನೆ ಗೊತ್ತಿಲ್ಲ? ಹ್ಯುಂಡೈ ಮತ್ತು ಕಿಯಾ ಕಾರುಗಳಂತೂ ಅತ್ಯಂತ ಜನಪ್ರಿಯ ವಾಹನಗಳಾಗಿವೆ. ಇವುಗಳಲ್ಲಿ ಯಾವುದೂ ಇಲ್ಲವೆಂದರೂ ನಮ್ಮ ಮನೆಗಳಲ್ಲಿರುವ ಎಲೆಕ್ಟ್ರಾನಿಕ್ ಉಪಕರಣಗಳ ಒಂದು ಸೆಮಿ ಕಂಡಕ್ಟರ್ ದಕ್ಷಿಣ ಕೊರಿಯಾದ್ದಾಗಿರಬಹುದು.

ಕೇವಲ 51.7 ಮಿಲಿಯನ್ ಜನಸಂಖ್ಯೆ ಇರುವ ಪುಟ್ಟ ದೇಶವೊಂದು ಬಿಲಿಯನ್ ಜನಸಂಖ್ಯೆಯ ಭಾರತದ ಗ್ರಾಹಕರಿಗಷ್ಟೇ ಅಲ್ಲದೆ ಚೀನಾ ಮತ್ತು ಅಮೆರಿಕದಂತಹ ಬೃಹತ್ ದೇಶಗಳಿಗೆ ರಫ್ತು ಮಾಡುವ ಪ್ರಮುಖ ದೇಶವಾಗಿದೆ. ಜಪಾನ್, ಸಿಂಗಪುರ, ವಿಯೆಟ್ನಾಂ ಹಾಂಗ್‌ಕಾಂಗ್‌ಗಳಂತಹ ನೆರೆಹೊರೆಯ ದೇಶಗಳು ಕೂಡ ದಕ್ಷಿಣ ಕೊರಿಯಾದ ಗ್ರಾಹಕರೇ ಆಗಿದ್ದಾರೆ. ಪ್ರಪಂಚದ ಇತರೆ ಬಹುತೇಕ ದೇಶಗಳಿಗೂ ತನ್ನ ಉತ್ಪನ್ನಗಳನ್ನು ರಫ್ತು ಮಾಡುತ್ತದೆ. ಅದಕ್ಕೆ ಬೇಕಾದ ಗುಣಮಟ್ಟ, ಮುತ್ಸದ್ದಿತನ ಮತ್ತು ಕೈಗಾರಿಕೋದ್ಯಮ ಆ ದೇಶಕ್ಕಿದೆ.

ಕೈಗಾರಿಕೆ ಅತ್ಯಂತ ಮುಂದುವರೆದಿರುವ ದಕ್ಷಿಣ ಕೊರಿಯಾದಲ್ಲಿ ಬರೀ ಕಾಂಕ್ರೀಟ್ ಕಟ್ಟಡಗಳು, ಫ್ಯಾಕ್ಟರಿಗಳು, ಹೈಟೆಕ್ ನೋಟಗಳೇ ತುಂಬಿರಬಹುದೆಂಬುದು ಪ್ರವಾಸಕ್ಕೆ ಮುನ್ನಿನ ನನ್ನ ಅಂದಾಜಾಗಿತ್ತು. ದಕ್ಷಿಣ ಅಮೆರಿಕ, ದಕ್ಷಿಣ ಭಾರತದಂತೆ ದಕ್ಷಿಣ ಕೊರಿಯಾ ಎಂದರೆ ಮನಸ್ಸಿನಲ್ಲಿ ಅದ್ಯಾವುದೋ ಒಂದು ಆಪ್ತತೆ ಮತ್ತು ಅಪ್ಪಟ ರಸಾನುಭೂತಿ ಕೂಡ ಮನೆಮಾಡಿತ್ತು.

ಈ ಭೂ ಭಾಗದ ಸಂಕೀರ್ಣ ಸಾಮಾಜಿಕ ಆಚರಣೆಗಳು, ಬಡವ ಸಿರಿವಂತರ ನಡುವಿನ ಅಂತರ, ರಾಜಕೀಯ ತಳಮಳಗಳು, ಯುದ್ಧಗಳ ಬಗ್ಗೆ ಒಂದಿಷ್ಟು ತಿಳಿದಿತ್ತು. ಅದಕ್ಕಿಂತ ಹೆಚ್ಚಾಗಿ ಅವರ ಸಮಾಜ ನಮ್ಮ ದೇಶದ ಸಮಾಜದಂತೆಯೇ ಇರುವುದು, ಅದರ ಆಂತರಿಕ ತಳಮಳಗಳು, ಹಂತ ಹಂತವಾದ ಬೆಳವಣಿಗೆಗಳು, ಸಮಾಜದಲ್ಲಿ ಸ್ತ್ರೀಯರಿಗೆ ಸಿಗುವ ಸ್ಥಾನಮಾನಗಳು ಕ್ರಮೇಣ ಬೆಳೆದದ್ದು, ಭಾರತದಂತೆಯೇ ಅತ್ಯಂತ ಆಪ್ತ ಬಂಧಗಳ ಕಠಿಣ ಮತ್ತು ಪ್ರೀತಿ ತುಂಬಿದ ಕೌಟುಂಬಿಕ ವ್ಯವಸ್ಥೆಗಳು ದಕ್ಷಿಣ ಕೊರಿಯಾದಲ್ಲಿರುವುದು ಮಾಧ್ಯಮಗಳಿಂದ ಅರಿತ ವಿಚಾರಗಳಾಗಿದ್ದವು. ದಕ್ಷಿಣ ಕೊರಿಯಾದ ಐತಿಹಾಸಿಕ ಧಾರಾವಾಹಿಗಳ ಕಾರಣ ಈ ದೇಶದ ಬೆಳವಣಿಗೆಯ ಸಂಕೀರ್ಣತೆಗಳು ಮನಸ್ಸಿಗೆ ನಾಟಿದ್ದವು. ಜನಪ್ರಿಯ ಕೊರಿಯನ್ ಧಾರಾವಾಹಿಗಳು ಮತ್ತು ಸಿನಿಮಾಗಳು ಈ ಪ್ರವಾಸಕ್ಕೆ ಮತ್ತಷ್ಟು ಮೆರುಗನ್ನು ಕಟ್ಟಿದ್ದವು.

ವಿಮಾನದ ದೀರ್ಘ ಪಯಣದಲ್ಲಿ ಗಗನ ಸಖಿಸಖರ ವಿನಯಪೂರ್ವಕ ನಡವಳಿಕೆಗಳು, ಹೊರಬಂದರೂ ಕೇಳಿಸದಂತಹ ಮೃದುನುಡಿಗಳು, ಎಲ್ಲಿಯೂ ಸಮತೋಲನ ತಪ್ಪದ ವೃತ್ತಿಪರ ವರ್ತನೆಗಳು ದಕ್ಷಿಣ ಕೊರಿಯಾದ ಬಗೆಗಿನ ನಿರೀಕ್ಷೆಗಳನ್ನು ಮತ್ತಷ್ಟು ಹೆಚ್ಚಿಸಿದವು.

ದಕ್ಷಿಣ ಕೊರಿಯಾದ ರಾಜಧಾನಿ ಸಿಯೋಲ್‌ನ ವಿಮಾನ ನಿಲ್ದಾಣದಲ್ಲಿ ಇಳಿಯುತ್ತಲೇ ಇಡೀ ದೇಶದ ಗಾತ್ರದ ಅರಿವು ಮೂಡತೊಡಗುತ್ತದೆ. ಅಂತಹ ದೊಡ್ಡದೇನೂ ಅಲ್ಲದ ವಿಮಾನ ನಿಲ್ದಾಣ ಸುವ್ಯವಸ್ಥಿತವಾಗಿಯೇ ಇತ್ತು. ಪದಗಳಿಗೆ ದೀರ್ಘ, ಕೊಂಬು ಮತ್ತು ಒತ್ತುಗಳನ್ನು ಸೇರಿಸಿದಂತೆ ನಮ್ಮ ಕನ್ನಡದ ಕಿವಿಗಳಿಗೆ ಕೇಳಿಸುವ ಅವರ ಭಾಷೆ ಅಷ್ಟೇನೂ ನವಿರೆಂದು ಅನ್ನಿಸಲಿಲ್ಲ.

ಪರಸ್ಪರ ವಂದಿಸುವಾಗ ಇಬ್ಬರು ವ್ಯಕ್ತಿಗಳು ಸ್ವಲ್ಪ ದೂರ ನಿಲ್ಲದಿದ್ದರೆ, ನಡುಬಗ್ಗಿಸಿ ಮುಂದಕ್ಕೆ ಬಾಗಿ 'ನಮಸ್ತೆ' ಹೇಳುವ ಅವರ ಉಭಯ ಕುಶಲೋಪರಿ ತಲೆಗಳ ಡಿಕ್ಕಿಗೆ ಅವಕಾಶ ಮಾಡಿಕೊಡುತ್ತದೆಂದು